# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 29 (256)
ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
ಉತ್ತರಿಸಬೇಕಾದ ದಿನಾಂಕ : 18.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ನಗರಕ್ಕೆ ಹೊಂದಿಕೊಂಡಂತೆ ಇರುವ ತೋಟಗಾರಿಕೆ ಇಲಾಖೆಯ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸುಮಾರು 22 ಎಕರೆ 11 ಗುಂಟೆ ಜಾಗವು ಸರ್ಕಾರದಿಂದ ಇನ್ನೂ ಸರಿಯಾದ ರೀತಿಯಲ್ಲಿ ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿದೆ.<br><br>ಸಿಂಧನೂರು ನಗರಕ್ಕೆ ಹೊಂದಿಕೊಂಡಿರುವ ಪ್ರಸ್ತಾಪಿತ ಜಮೀನನ್ನು 1967-68 ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆಗೆ ಹಸ್ತಾಂತರ ಮಾಡಲಾಗಿದ್ದು, ಕ್ಷೇತ್ರದ ಒಟ್ಟು ವಿಸ್ತೀರ್ಣ 22 ಎಕರೆ 11 ಗುಂಟೆ ಇದ್ದು, ಪ್ರಸ್ತುತ ಸುಮಾರು 58 ವರ್ಷ ವಯಸ್ಸಿನ 120 ಸಪೋಟ ಮರಗಳಿರುತ್ತವೆ. ಸದರಿ ತೋಟಗಾರಿಕೆ ಕ್ಷೇತ್ರಕ್ಕೆ ನೀರಿನ ಮೂಲ ಆಧಾರವಾಗಿದ್ದ D-40 ಕಾಲುವೆಯ ಅಕ್ಕಪಕ್ಕದ ಜಮೀನುಗಳನ್ನು ನಿವೇಶನಗಳಾಗಿ ಪರಿವರ್ತಿಸಿದ್ದು, ನೀರಿನ ಕಾಲುವೆಯು ಇಲ್ಲದಂತಾಗಿರುತ್ತದೆ. ಇದರಿಂದ ತೋಟಗಾರಿಕೆ ಕ್ಷೇತ್ರದಲ್ಲಿ ಶಾಶ್ವತ ನೀರಾವರಿ ವ್ಯವಸ್ಥೆ ಇಲ್ಲದಂತಾಗಿದ್ದು, ಇಲಾಖೆ ವತಿಯಿಂದ ಹೊಸದಾಗಿ ಬೋರ್ ವೆಲ್ ಗಳನ್ನು ಕೊರೆಸಲಾಗಿದ್ದರೂ, ನೀರು ಲಭಿಸಿರುವುದಿಲ್ಲ, ಹಾಗೂ ಇತರೇ ಯಾವುದೇ ನೀರಿನ ಮೂಲ ಇಲ್ಲದಿರುವುದರಿಂದಾಗಿ ಮರಗಳು ಸೊರಗುವುದು ಹೆಚ್ಚಾಗಿರುತ್ತದೆ.<br><br>ಸದರಿ ತೋಟಗಾರಿಕೆ ಕ್ಷೇತ್ರದ ಜಮೀನಿನ ಮೂಲ ಮಾಲಿಕತ್ವದ ಕುರಿತು ವಿವಿಧ ನ್ಯಾಯಾಲಯ ಪ್ರಕರಣಗಳ ವಿಚಾರಣೆಗಳಿಂದ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆಯಾಗಿರುತ್ತದೆ.<br>ಆದಾಗ್ಯೂ ಸರ್ಕಾರಿ ಹಣ್ಣಿನ ತೋಟ, ಸಿಂಧನೂರಿನ ಕಾಂಪೌಂಡ್ ಗೋಡೆ ಮುಂಭಾಗದಲ್ಲಿ ಅನಧಿಕೃತವಾಗಿ ನಿರ್ಮಿಸಲಾದ 200 ಪೆಟ್ಟಿಗೆ ಅಂಗಡಿಗಳನ್ನು 2024 ರಲ್ಲಿ ಜಿಲ್ಲಾಡಳಿತ ರಾಯಚೂರು ಹಾಗೂ ಪೋಲೀಸ್ ಇಲಾಖೆಗಳ ಸಹಯೋಗದೊಂದಿಗೆ ತೆರವುಗೊಳಿಸಲಾಗಿರುತ್ತದೆ. ಈ ಜಾಗಕ್ಕೆ ಪುನಃ ಅನಧಿಕೃತ ಪ್ರವೇಶವನ್ನು ನಿರ್ಬಂಧಿಸಲು ರೂ. 5.00 ಲಕ್ಷ ಅನುದಾನ ವೆಚ್ಚದಲ್ಲಿ ಚೈನ್ ಲಿಂಕ್ ಮೆಶ್ ಬೇಲಿಯನ್ನು ನಿರ್ಮಿಸಲಾಗಿರುತ್ತದೆ. |

| | | |
|---|---|---|
| | | 2025-26 ನೇ ಸಾಲಿನ ಇಲಾಖಾ ಯೋಜನೆಯಡಿ ಸಸ್ಯಾಭಿವೃದ್ಧಿ ಕಾರ್ಯಕ್ರಮದಡಿ 2000 ಸಂಖ್ಯೆ ಅಲಂಕಾರಿಕ ಸಸಿ ಮತ್ತು 2000 ಸಂಖ್ಯೆ ಅಲಂಕಾರಿಕ ಕುಂಡಗಳ ಉತ್ಪಾದನೆ , ಚಾಲೇಂಜ್ ಫಂಡ್ ಕಾರ್ಯಕ್ರಮದಡಿ 2.0 ಹೆಕ್ಟೇರ್ ಜೋಳ ಬೆಳೆಯಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ. ಕ್ಷೇತ್ರ ನಿರ್ವಹಣೆ ಕಾರ್ಯಕ್ರಮದಡಿ 6.0 ಹೆಕ್ಟೇರ್ ಪ್ರದೇಶ ಸಾಧಾರಣ ಕಾಡು ಸ್ವಚ್ಛಗೊಳಿಸುವುದು ಹಾಗೂ 10 ಟನ್ ಕೊಟ್ಟಿಗೆ ಗೊಬ್ಬರ ಒದಗಿಸಲು ಗುರಿ ಹೊಂದಿದ್ದು, ಒಟ್ಟಾರೆ ರೂ.6.215 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿ, ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ. |
| ಆ) | ಬಂದಿದ್ದಲ್ಲಿ, ಸದರಿ ಜಾಗದಲ್ಲಿ ಸಿಂಧನೂರು ನಗರದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಿಶಾಲವಾದ ಮತ್ತು ಸುಸಜ್ಜಿತವಾದ ಪಾರ್ಕ್ ನಿರ್ಮಾಣ ಮಾಡುವ ಸಂಬಂಧ ರೂ.8.00 ಕೋಟಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಕೆಕೆಆರ್‌ಡಿಬಿಗೆ ಸಲ್ಲಿಸಲಾಗಿರುವುದಾಗಿ ಕಳೆದ ಬಜೆಟ್ ಅಧಿವೇಶನದಲ್ಲಿ ಮಾನ್ಯ ಸಚಿವರು ಉತ್ತರ ನೀಡಿದ್ದು, ಪ್ರಸ್ತುತ ಯಾವ ಹಂತದಲ್ಲಿದೆ; | ಸದರಿ ಜಾಗದಲ್ಲಿ ಸಿಂಧನೂರು ನಗರದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಿಶಾಲವಾದ ಮತ್ತು ಸುಸಜ್ಜಿತವಾದ ಪಾರ್ಕ್ ನಿರ್ಮಾಣ ಮಾಡುವ ಸಂಬಂಧ ರೂ. 8.00 ಕೋಟಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಕೆ.ಕೆ.ಆರ್.ಡಿ.ಬಿ ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಈ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಲು ಹಾಗೂ ಸೂಕ್ತ ಕ್ರಮ ಕೈಗೊಳ್ಳಲು ಕೆ.ಕೆ.ಆರ್.ಡಿ.ಬಿ ಕಾರ್ಯದರ್ಶಿಗಳಿಂದ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ರಾಯಚೂರು ರವರಿಗೆ ತಿಳಿಸಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |
| ಇ) | ಸದರಿ ಸ್ಥಳದಲ್ಲಿ ಸುಸಜ್ಜಿತವಾದ ಪಾರ್ಕ್ ಅನ್ನು ನಿರ್ಮಾಣ ಮಾಡಿ ಸಾರ್ವಜನಿಕರ ಬಳಕೆಗಾಗಿ ಯಾವ ಕಾಲಮಿತಿಯೊಳಗೆ ಒದಗಿಸಲಾಗುವುದು? | ಪ್ರಸ್ತಾವನೆಗೆ ಶೀಘ್ರದಲ್ಲಿ ಅನುಮೋದನೆ ದೊರಕಿಸಿಕೊಂಡು ಸುಸಜ್ಜಿತವಾದ ಪಾರ್ಕ್ ಅನ್ನು ನಿರ್ಮಾಣ ಮಾಡಿ ಸಾರ್ವಜನಿಕರ ಬಳಕೆಗಾಗಿ ಒದಗಿಸಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: HORTI 427 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು